ಶ್ರೀ ಎಂ.ಸಿ. ಆಂಜನೇಯ ರೆಡ್ಡಿಯವರು.—ಈ ರೀತಿ ಜಾಸ್ತಿಯಾಗಿರುವುದನ್ನು ನೋಡಿದರೆ ಪಾನನಿರೋಧ ಕಾನೂನನ್ನು ಜಾರಿಗೆ ತಂದಿದ್ದರಿಂದ ಏನೂ ಪ್ರತಿಫಲ ವಾಗಲಿಲ್ಲವೆಂದು ಊಹಿಸಬಹುದಲ್ಲವೇ?

Sri T. CHANNIAH.—It is a matter of opinion.

ಶ್ರೀ ಎಂ. ಸಿ. ಆಂಜನೇಯ ರೆಡ್ಡಿಯವರು—ಕೋಲಾರ ಡಿಸ್ಟ್ರಿಕ್ಟಿನಲ್ಲಿ ಈಚಲು ಮರಗಳಲ್ಲಿ ಹೆಂಡ ವನ್ನು ಇಳಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಚನ್ನಯ್ಯನವರು.—ಗೋರಿಬಿದನೂರು ಒಂದು ತಾಲ್ಲೂಕಿನಲ್ಲಿ ಮಾತ್ರ ಹೋದ ವರ್ಷ tap ಮಾಡಬೇಕೆಂದು order ಮಾಡಿತ್ತು. ಅಲ್ಲಿ ಬಿಟ್ಟು ಬೇರೆ ಇನ್ನೆಲ್ಲಗೂ ಆರ್ಡರ್ ಮಾಡಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿಯವರು.—ಸರ್ಕಾರ ದವರು ಅನುಮತಿಕೊಟ್ಟಿರುವ ಪ್ರದೇಶವಲ್ಲದೆ ಬೇರೆ ಕಡೆ ಕಳ್ಳತನದಿಂದ ಹೆಂಡವನ್ನು ಇಳಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯನವರು.—ನಮ್ಮ ಗಮನಕ್ಕೆ ಬಂದಿಲ್ಲ; ನಿಮ್ಮ ಗಮನಕ್ಕೆ ಬಂದಿದ್ದರೆ ಹೇಳಬೇಕು.

ಶ್ರೀ ಎಂ. ಸಿ. ಆಂಜನೇಯ ರೆಡ್ಡಿಯವರು.—ಆ ರೀತಿ ಮಾಡುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ತಿಳಿದು ಕೊಳ್ಳುವುದಕ್ಕೆ ಪ್ರಯತ್ನಪಡುತ್ತೀರಾ?

ಶ್ರೀ ಟಿ. ಚನ್ನಯ್ಯನವರು.—ಪ್ರಯತ್ನಪಡುತ್ತೇವೆ.

ಶ್ರೀ ಎಂ. ಸಿ. ಆಂಜನೇಯ ರೆಡ್ಡಿಯವರು.—ಹಾಗೆ ತಿಳಿದುಕೊಂಡು ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಕೊಡುವುದಕ್ಕೆ ಸಿದ್ಧರಿದ್ದೀರಾ?

Mr. T. CHANNIAH.—Certainly.

1 P.M.

ಶ್ರೀ ಕೆ. ಪ್ರಭಾಕರ್ ಅವರು (ನೆಲಮಂಗಲ—ಅನುಸೂಚಿತ ಜಾತಿಗಳು).—1949-50 ರಲ್ಲಿ ವರದಿಯಾದ ಕೇಸುಗಳ ಪೈಕಿ 54 ಕೇಸುಗಳನ್ನು ಫೈಲ್‌ಮಾಡಿಲ್ಲ ಕಾರಣವೇನು?

Sri T. CHANNIAH.—We will look into it.

ಶ್ರೀ ಎ. ಭೀಮಪ್ಪನಾಯಕರು (ಮೊಳಕಾಲ್ಮೂರು).—ಇತ್ತೀಚೆಗೆ ಪ್ರತಿ ವರ್ಷವೂ ಹೆಚ್ಚು ಹೆಚ್ಚಾಗಿ ಶಿಕ್ಷೆಯಾಗುತ್ತಿರುವುದು ಕೇಸುಗಳನ್ನು ಹೆಚ್ಚು ಕಂಡುಹಿಡಿಯುವುದರಿಂದ; ಆದಕಾರಣ ಪೋಲೀಸ್ ಇಲಾಖೆಯಲ್ಲಿ ದಕ್ಷತೆ ಹೆಚ್ಚಾಗಿದೆ ಎಂಬುದು ವ್ಯಕ್ತವಾಗುವುದಿಲ್ಲವೆ?

ಶ್ರೀ ಟಿ. ಚನ್ನಯ್ಯನವರು.—ಹೌದು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು (ಹುಲಿಯೂರು ದುರ್ಗ).—1948-49ರಲ್ಲಿ ಬಹಳ ಕಡಮೆ ಕೇಸುಗಳಿದ್ದು. 1950-51ರಲ್ಲಿ 9ರಷ್ಟು 10ರಷ್ಟು ಹೆಚ್ಚಾಗಿರುವುದಕ್ಕೆ ಜನರಲ್ಲಿ ಪಾನನಿರೋಧ ಹೋಗುತ್ತದೆಯೆಂಬ ಮನೋಭಾವದಿಂದಿರುವುದು ಕಾರಣವೆ? (ನಗು!)

ಶ್ರೀ ಎಸ್. ಗೋಪಾಲಗೌಡರು (ಸಾಗರ—ಹೊಸನಗರ).—ಈ ಅಂಕೆ ಅಂಶಗಳಿಂದ ಪೋಲೀಸ್ vigilance ಹೆಚ್ಚಾಗಿದೆಯೆಂತಲೊ ಅಥವಾ ಕುಡಿಯುವವರ ಸಂಖ್ಯೆ ಹೆಚ್ಚಾಗಿದೆಯೆಂದು ಭಾವಿಸಬಹುದೊ?

ಶ್ರೀ ಟಿ. ಚನ್ನಯ್ಯನವರು.—ಅದು ತಮ್ಮ ಅಭಿಪ್ರಾಯದ ಮೇಲೆ ಹೋಗುತ್ತದೆ.

ಶ್ರೀ ಕೆ. ಲಕ್ಕಪ್ಪನವರು (ಚನ್ನರಾಯಪಟ್ಟಣ).—ಈ ಸಂಬಂಧದಲ್ಲಿ ತಪ್ಪಿತಸ್ಥರಿಗೆ maximum punishment ಕೊಡುವುದಕ್ಕೆ ಏರ್ಪಾಡುಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯನವರು.—ಯೋಚನೆಮಾಡುತ್ತಿದ್ದೇವೆ.

Mr. SPEAKER.—Question hour is over.

Disposal of certain Short Notice Questions.

Sri M. LINGANNA (Nanjangud).—Sir, with regard to Short Notice questions I want to have an explanation from the Chair. I humbly submit that including myself several friends had filed some short notice questions, but till now we do not know what has happened to them and when they are going to be taken up.

Mr. SPEAKER.—The Hon'ble Member, I remember, has sent two or three short notice questions. Some of them are disallowed. One I remember, subject to correction, is allowed, and will be answered if the Minister concerned will give his consent. I am consulting the concerned Minister.

MOTION FOR ADJOURNMENT.

Calamities due to the recent blast at Kolar Gold Fields.

Mr. SPEAKER.—It is difficult for me to make out whether it is a short notice question or an adjournment motion given notice of by Sri Gopala Gowda. He wants his proposition to be taken up as an adjournment motion which runs as follows:

> "to discuss the calamities due to the recent blast at Kolar Gold Fields".

The motion does not indicate when the blast took place and whether it is a definite matter of urgent public importance. The Member will have opportunities of debating this subject also during the time of voting of demands, as I have already indicated. It is also not clear from the motion what the facts are. Though it would not be within the jurisdiction of the